**ಆಹಾರ ಪದಾರ್ಥಗಳ ಬೆಲೆಗಳ ನಿಯಂತ್ರಣ**

392 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಆಹಾರ ಪದಾರ್ಥಗಳ ಬೆಲೆ ನಿಯಂತ್ರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?*

ಶ್ರೀಮತಿ ಮನೋರಮಾ ಮದ್ವರಾಜ್ (ಆಹಾರ ಸಚಿವರು) :

ಅ) ಆಹಾರ ಪದಾರ್ಥಗಳ ಬೆಲೆಗಳನ್ನು ನಿಯಂತ್ರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ (ಪಿ.ಡಿ.ಎಸ್.) ಆಹಾರ ಧಾನ್ಯಗಳನ್ನು ಮುಕ್ತ ಮಾರುಕಟ್ಟೆಯ ಬೆಲೆಗಿಂತ ಕಡಿಮೆ ದರದಲ್ಲಿ ಆಹಾರ ಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿದೆ.

2) ಮುಕ್ತ ಮಾರುಕಟ್ಟೆಯ ಸಗಟು ವ್ಯಾಪಾರಿಗಳು ದಾಸ್ತಾನು ಮಿತಿಗಿಂತ ಅಕ್ರಮವಾಗಿ ಹೆಚ್ಚಿಗೆ ದಾಸ್ತಾನು ಮಾಡಿದ್ದಲ್ಲಿ ಹಾಗೂ ಕಾಳಸಂತೆ ಕೋರರು ಮತ್ತು ಅಕ್ರಮ ದಾಸ್ತಾನು ಗಾರರ ಮೇಲೆ ಅವಶ್ಯಕ ವಸ್ತುಗಳ ಕಾಯಿದೆಯನ್ವಯ ದಾಳಿಗಳನ್ನು ಮಾಡಿ ಆಹಾರ ಧಾನ್ಯಗಳ ಬೆಲೆಗಳನ್ನು ನಿಯಂತ್ರಿಸಲಾಗುತ್ತಿದೆ.

**ಗ್ರಾಮಾಂತರ ಬಡವರಿಗೆ ತ್ರಿವರ್ಣ ಪಡಿತರ ಚೀಟಿ ಕುರಿತು**

179 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಗ್ರಾಮಾಂತರ ಬಡವರಿಗೆ ಹಾಗೂ ನಗರಗಳ ಕೊಳಚೆ ಪ್ರದೇಶದ ನಿವಾಸಿಗಳಿಗೆ ತ್ರಿವರ್ಣ ಪಡಿತರ ಜೀವಿಗಳ ವಿತರಣೆ ಸಮರ್ಪಕವಾಗಿ ಆಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

*ಆ) ಹಾಗಿಲ್ಲದಿದ್ದರೆ ತ್ರಿವರ್ಣ ಪಡಿತರ ಚೀಟಿಗಳ ವಿತರಣೆಗೆ ಕಾಲಮಿತಿಗೊಳಪಡಿಸಿ ಒದಗಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?*

ಶ್ರೀಮತಿ ಮನೋರಮಾ ಮದ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಇಲ್ಲ

ಆ) ಈಗಾಗಲೇ 12,98,059 ಗುರುತಿಸಿ ತ್ರಿವರ್ಣ ಪಡಿತರ ಚೀಟಿಗಳನ್ನು ಹಂಚಿಕೆ ಮಾಡಲಾಗಿದ್ದು ಉಳಿದ ಫಲಾನುಭವಿಗಳನ್ನು ಗುರುತಿಸಿ ಶೀಘ್ರವಾಗಿ ತ್ರಿವರ್ಣ ಪಡಿತರ ಚೀಟಿಯನ್ನು ನೀಡುವಂತೆ ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ.

**ಖಾಸಗಿ ಖಾಲೇಜುಗಳಲ್ಲಿ ಶಿಕ್ಷಣದ ವ್ಯಾಪಾರ.**

484 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?